ಉ) ವಿಶೇಷ ಪ್ಯಾಕೇಜ್ ನಡಿ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ? ಎಷ್ಟು ಪ್ಯಾಕೇಜ್ ನೀಡಿದೆ? ಮಂಜೂರು ಮಾಡಿದ ಪರಿಹಾರ ಧನ ಎಷ್ಟು? ಎಷ್ಟು ಜನರಿಗೆ ಪರಿಹಾರ ಧನ ನೀಡಲಾಗಿದೆ? (ವಿವರ ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಇತ್ತೀಚಿನ ದಿನಗಳಲ್ಲಿ ಯಾವುದೇ ಪ್ರಕರಣಗಳು ನಡೆದದ್ದು ವರದಿಯಾಗಿರುವುದಿಲ್ಲ.

ಆ) 2001ನೇ ವರ್ಷದಲ್ಲಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಈ ಪ್ರಕರಣವು ನಡೆದಿತ್ತು.

ಇ) 10 ಆರೋಪಿಗಳನ್ನು ಬಂದಿಸಿ ಅವರ ಮೇಲೆ IPC ಸೆಕ್ಷನ್ ಪ್ರಕಾರ ದಾವೆ ಹೂಡಲಾಗಿದೆ. ಬಟ್ಟೆಯು ವಿಚಾರಣಾ ಹಂತದಲ್ಲಿದೆ.

ಈ) ಇಲ್ಲ.

ಉ) 2001ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಕೊಂಚಾವರಂ ಪ್ರದೇಶದಲ್ಲಿ ಈ ಪ್ರಕರಣವು ನಡೆದಿದ್ದು ಈ ಕೆಳಗಿನ ಕಾರ್ಯಕ್ರಗಳ ಸೌಲಭ್ಯಗಳನ್ನು ನೀಡಿದೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯ ಕೊಂಚಾವರಂ ಪ್ರದೇಶದಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ 67 ಸ್ವಸಹಾಯ ಗುಂಪುಗಳನ್ನು ರಚಿಸಿ 50 ಗುಂಪುಗಳಿಗೆ ಸಶಕ್ತತೆಗಾಗಿ ಪ್ರತಿ ಗುಂಪಿಗೆ ರೂ.5000 ಸುತ್ತುನಿಧಿಯನ್ನು ನೀಡಲಾಗಿದೆ. ಅದಲ್ಲದೆ ಸರ್ಕಾರದ ಕಾರ್ಯಕ್ರಮಗಳಡಿ ಬಾಲಿಕಾ ಸಮೃದ್ಧಿ ಯೋಜನೆ, ಹೆರಿಗೆ ಭತ್ಯೆ ಯೋಜನೆಗಳ ಕೆಳಗೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಹೆಂಗಸರಿಗೆ, ಹೆಣ್ಣು ಮಕ್ಕಳಿಗೂ ಕೌಶಲ್ಯ ತರಬೇತಿಯನ್ನು ನೀಡಿ ಸ್ವಯಂ ಉದ್ಯೋಗಕ್ಕೆ ಅವಕಾಶ ಕಲ್ಪಿಸಿ ಕೊಡಲಾಗಿದೆ. 10 ಫಲಾನುಭವಿಗಳಿಗೆ ಮನೆಬೆಳಕು ಯೋಜನೆಯಡಿಯಲ್ಲಿ ಸಹಾಯಧನವನ್ನು ನೀಡಲಾಗಿದೆ.

ಬೆಳೆ ವಿಮೆ ಯೋಜನೆಯಡಿ ಪರಿಹಾರ ನೀಡುವುದು

162(181) ಶ್ರೀ ಯೋಗೀಶ್ ಭಟ್.ಎಸ್. (ಮಂಗಳೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತಂದಿದ್ದು ಯಾವಾಗ?

ಆ) ಈ ಯೋಜನೆಗೆ ಮೀಸಲಿಟ್ಟಿದ್ದ ಹಣ ಎಷ್ಟು; ಇದುವರೆವಿಗೂ ಬಿಡುಗಡೆ ಮಾಡಿರುವ ಹಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಧಾರವಾಡ ಜಿಲ್ಲೆಯ ರೈತರು ಬೆಳೆ ವಿಮೆ ಪರಿಹಾರಕ್ಕೆ ಆಗ್ರಹಿಸಿ ಹಲವು ಸಲ ಪ್ರತಿಭಟನೆ ನಡೆಸಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು 1985 ರಲ್ಲಿ ಜಾರಿಗೆ ತಂದು 1999ರ ಹಿಂಗಾರು ಹಂಗಾಮಿನಿಂದ ಹಿಂತೆಗೆದುಕೊಳ್ಳಲಾಯಿತು. 2001-01ರ ಮುಂಗಾರು ಹಂಗಾಮಿನಿಂದ ಹೊಸ ಯೋಜನೆಯಾದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ರಾಷ್ಟ್ರೀಯ ಕೃಷಿ ಭೀಮಾ ಯೋಜನೆಯಡಿ 2000-01ನೇ ಸಾಲಿನಲ್ಲಿ ರೂ. 30-00 ಕೋಟಿ, 2001-02ನೇ ಸಾಲಿನಲ್ಲಿ ರೂ.10.00 ಕೋಟಿ ಮತ್ತು 2002-03ನೇ ಸಾಲಿನಲ್ಲಿ ರೂ. 29.08 ಕೋಟಿಯನ್ನು ಮೀಸಲಿಡಲಾಗಿತ್ತು. ಯೋಜನೆಯಡಿಯಲ್ಲಿ ಹಣವನ್ನು ಜಿಲ್ಲಾವಾರು ಮೀಸಲಿಡಲಾಗುವುದಿಲ್ಲ. ಕಾರಣ ಒಟ್ಟಾರೆ ಮಂತಿಕೆಯನ್ನು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ನೀಡಿ ನಷ್ಟ ಪರಿಹಾರವನ್ನು ಮಾತ್ರ ಬ್ಯಾಂಕುಗಳ ಮೂಲಕ ರೈತರಿಗೆ ಬಿಡುಗಡೆ ಮಾಡಲಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ. ಆದಾಗ್ಯೂ 2001-02ನೇ ಸಾಲಿನ ಬೆಳೆ ನಷ್ಟ ಪರಿಹಾರವನ್ನು ವಿತರಿಸುವ ಕಾರ್ಯ ಪ್ರಾರಂಭವಾಗಿದೆ.